

‘ನಿನ್ನ ಯೋಚನೆ ತರ್ಕಬದ್ಧವಾಗಿದೆ, ಬಿದ್ದಪ್ಪ. ಆದರೆ ಒಂದೆರಡು ಹೊಂದಾಣಿಕೆಯಾಗದ ಅಂಶಗಳು. ಸಿ.ಸಿ. ಟೀವಿ ಇದ್ದರೂ, ಕಳ್ಳ ಕದಿಯಲು ಯಾಕೆ ಹೋದ? ಆತನಿಗೆ ಕೀಲಿಕೈ ಇರುವ ಜಾಗ ಹೇಗೆ ಗೊತ್ತಾಯಿತು?’

‘ಪ್ರಾಯಶಃ ಆ ವ್ಯಕ್ತಿಗೆ ಸಿ.ಸಿ. ಟೀವಿ ಕೆಟ್ಟು ಹೋದ ವಿಚಾರ ಗೊತ್ತಿದೆ. ಕೀಲಿಕೈ ಇಡುವ ಜಾಗವನ್ನು ಆತ ಕಂಡಿದ್ದಿರಬಹುದು. ಆ ಕೋಣೆಯಲ್ಲಿದ್ದ ಕಿಟಕಿಯ ಬಳಿ ನಿಂತು, ಕೀಲಿಕೈ ತೆಗೆಯುವುದನ್ನು ನೋಡಿರಬೇಕು.’ ನಾನು ಸಮರ್ಥಿಸಿದೆ.

‘ಆದರೂ ಆ ನೋಟಿನ ಕಟ್ಟು ಸಿಗದೇ ನಮಗೆ ಯಾರ ಮೇಲೂ ಆರೋಪ ಹೊರಿಸಲಾಗದು. ಇಷ್ಟಕ್ಕೂ, ಅಷ್ಟು ಸಣ್ಣ ಮೊತ್ತವನ್ನೇಕೆ ಕದ್ದ?’

‘ನೀನನ್ನುವುದು ನಿಜ. ಆದರೆ ಕುಡುಕರಿಗೆ ಸಣ್ಣ ಮೊತ್ತವೂ ಸಾಕಾಗುತ್ತದೆ!’

‘ಅಂದರೆ?’

‘ರಕ್ಷಿತ್ ತಿಮ್ಮಯ್ಯನಿಗೆ ಕುಡಿತದ ಚಟವಿದೆ. ಅಷ್ಟು ಜೋರಾಗಿ ಬಾಗಿಲು ಬಡಿದರೂ, ಆತ ತೆರೆಯದಿರುವುದು ಅನುಮಾನಕ್ಕೆ ಕಾರಣವಾಗುತ್ತೆ. ಆತ ನಿದ್ದೆಯ ನಟನೆ ಮಾಡಿರಬೇಕು ಅಂತ ನನ್ನ ಅನಿಸಿಕೆ.’

‘ಹಾಗಾದ್ರೆ ಆ ಮುರಿದ ಕನ್ನಡಕ ಯಾರದ್ದು?’

‘ಬಹುಶಃ ಕನ್ನಡಕಕ್ಕೂ, ಕಳ್ಳತನಕ್ಕೂ ಸಂಬಂಧವಿಲ್ಲ!’

‘ನೋಟಿನ ಕಟ್ಟಿನಲ್ಲೇ ಮಹತ್ವ ಇದೆ ಬಿದ್ದಪ್ಪ. ಅದು ಸಿಗದೇ ಏನೂ ಹೇಳಲಾಗದು.’

‘ಅಂದರೆ ಆ ನೋಟಿನ ಕಟ್ಟಿನಲ್ಲೇ ಏನೋ ವಿಶೇಷವಿದೆ ಅಂತ ನಿನ್ನ ಭಾವನೆಯೆ?’

‘ಏನೂ ಹೇಳಲಾಗದು.’

ಆ ಸಂಜೆ ಆರು ಗಂಟೆಯ ಹೊತ್ತಿಗೆ ಕರಮಚಂದ ಯಾರನ್ನೋ ತುರ್ತಾಗಿ ಭೇಟಿಯಾಗುವುದಿದೆ ಅಂತ ಹೇಳಿ ಹೊರಟು ಹೋದ. ಯಾವುದೋ ಒಬ್ಬ ಕಕ್ಷಿಗಾರನಿಗೆ ಅಪಾಯಿಂಟ್‌ಮೆಂಟ್ ನೀಡಿದ್ದರಿಂದ ನಾನು ಕಚೇರಿಯಲ್ಲೇ ಉಳಿಯಬೇಕಾಯಿತು.

***

ಮರುದಿನ ಬೆಳಿಗ್ಗೆ ಎಂಟರ ಹೊತ್ತಿಗೆ ನಾನು ಉಪಾಹಾರದ ತಯಾರಿಯಲ್ಲಿ ಕಿಚನ್‌ನಲ್ಲಿ ಇದ್ದೆ. ಕರಮಚಂದ ದಿನಪತ್ರಿಕೆ ತಿರುವುತ್ತಾ ಇದ್ದ. ಆಗ ಅತನ ಚರವಾಣಿ ನಾದ ಹೊಮ್ಮಿಸಿತು. ಯಾರಿಗೋ ಆತ ಗಟ್ಟಿಯಾಗಿ ಹೇಳಿದ್ದು ಕೇಳಿಸಿತು,

‘ಹೌದೇ! ಹಾಗಾದರೆ ನೀವು ಅಲ್ಲೇ ಇರಿ. ನಾವೀಗ ಬರ್ತೇವೆ.’

ಫೋನು ಇರಿಸಿದ ಕರಮಚಂದ ನುಡಿದ – ‘ಬಿದ್ದಪ್ಪ, ನಾವೀಗಲೇ ಆರ್ಜಿಗೆ ಹೋಗೋಣ. ಹತ್ತು ರೂಪಾಯಿಯ ನೋಟಿನ ಕಟ್ಟು ಸಿಕ್ಕಿತಂತೆ. ಸಚಿನ್ ಕುಟ್ಟಯ್ಯನ ಕೋಣೆಯಲ್ಲಿ.’

‘ಹೌದೇ! ಹೇಗೆ ಸಿಕ್ಕಿತಂತೆ?’

‘ಕೆಲಸದವಳು ಮನೆ ಗುಡಿಸುವಾಗ, ಕಪಾಟಿನ ಹಿಂಭಾಗದಲ್ಲಿತ್ತಂತೆ.’

ನನಗೆ ಏನೊಂದೂ ಅರ್ಥವಾಗಲಿಲ್ಲ. ಇಪ್ಪತ್ತು ನಿಮಿಷಗಳಲ್ಲಿ ನಾವು ಚಂಪಕಳ ಪಿ.ಜಿ.ಯಲ್ಲಿದ್ದೆವು. ಚಂಪಕ, ದೇವಯ್ಯ, ಚರ್ಮಣ್ಣ, ಮತ್ತು ಕೆಲಸದಾಕೆ ಅಲ್ಲಿದ್ದರು.

‘ಸಾರ್, ನಾನು ಕದ್ದಿಲ್ಲ. ನನಗೆ ಏನೂ ತಿಳಿಯದು.’ ಕುಟ್ಟಯ್ಯ ಕರಮಚಂದನನ್ನು ಕಂಡು ಹೇಳಿದ.

‘ನೀನೇ ಕದ್ದಿದ್ದು. ನಿನ್ನ ಕೋಣೆಯಲ್ಲಿ ಅದು ಹೇಗೆ ಬಂತು?’ ದೇವಯ್ಯ ಗದರಿದ.

‘ದೇವಯ್ಯ, ತುಸು ತಡೆಯಿರಿ. ನಾನೀಗಲೇ ಬಂದೆ.’ ಹಾಗೆಂದು ಕರಮಚಂದ ಮಾಯವಾದ. ಸುಮಾರು ಐದಾರು ನಿಮಿಷಗಳಲ್ಲಿ ಆತ ಪ್ರತ್ಯಕ್ಷನಾದ. ಆತನ ಮೊಗದಲ್ಲಿ ಕಿರುನಗೆಯಿತ್ತು.

‘ದೇವಯ್ಯ, ಇವನು ಹೇಳ್ತಿರೋದು ಸರಿ. ಇವನು ಹಣ ಕದ್ದಿಲ್ಲ.’

‘ಹಾಗಿದ್ರೆ ಇಲ್ಲಿ ಹೇಗೆ ಬಂತು?’

‘ಹೇಳ್ತಿನಿ. ಇವನು ನಿಮ್ಮ ಮನೆಯೊಳಗೆ ನಿನ್ನೆ ಬೆಳಿಗ್ಗೆ ಪ್ರವೇಶಿಸಿದ್ದು ನಿಜವೇ! ಆದರೆ ಉದ್ದೇಶ ಮಾತ್ರ ಬೇರೆ. ಇವನಿಗೆ ಹೆಣ್ಣುಮಕ್ಕಳನ್ನು ನೋಡುವ ಚಟ. ಇಲ್ಲಿ ಗೋಡೆಯಲ್ಲಿರುವ ಚಿತ್ರಗಳೇ ಈತನ ಅಭಿರುಚಿಗೆ ಸಾಕ್ಷಿ. ಅಲ್ಲಿ ಜಾಗಿಂಗ್ ಮಾಡ್ತಾ ಇದ್ದಾಗ, ಆತನಿಗೆ ಚಂಪಕ ಸ್ನಾನದ ಮನೆಯಲ್ಲಿರೋದು ಕಾಣಿಸಿದೆ. ಅದೇ ಹೊತ್ತಿಗೆ ನೀವು ಹೊರಹೋಗಿದ್ದು ನೋಡಿದ ಆತ, ತಕ್ಷಣ ಮನೆಯೊಳಗೆ ಬಂದ. ಬಚ್ಚಲುಮನೆಯ ಬಾಗಿಲ ರಂಧ್ರದಲ್ಲಿ ಕಣ್ಣು ಹೂಡಿ, ನೋಡ್ತಾ ಇರುವಾಗ ನೀವು ಹಠಾತ್ತಾಗಿ ಪತ್ರ ಒಯ್ಯಲು ಬಂದಿರಿ. ಗಾಬರಿಗೊಂಡ, ಆತ ತಕ್ಷಣ ಪಕ್ಕದ ಕೋಣೆಗೆ ನುಗ್ಗಿ, ಅಲ್ಲಿ ಕಿಟಕಿಗೆ ಹಾಕಿದ್ದ ಉದ್ದದ ಪರದೆಯಡಿ ಅಡಗಿ ಕುಳಿತ. ಹಾಗೆ ಓಡುವಾಗ, ಗೋಡೆಗೆ ಮುಖ ಹೊಡೆದು, ಕನ್ನಡಕ ಮುರಿಯಿತು. ನೀವು ಹೋದ ತಕ್ಷಣ ಆತ ಸದ್ದಿಲ್ಲದೆ ಅಲ್ಲಿಂದ ಜಾಗ ಖಾಲಿ ಮಾಡಿದ.’

‘ನಿಮಗೆ ಹೇಗೆ ಗೊತ್ತಾಯ್ತು?’

‘ಬಚ್ಚಲುಮನೆಯ ಬಾಗಿಲ ಮತ್ತು ಪಕ್ಕದ ಕೋಣೆಯ ಕಿಟಕಿಯ ಬಳಿ ಸಿಕ್ಕಿದ ಪಿರಮಿಡ್ ಆಕಾರದಲ್ಲಿ ನಿಂತಿದ್ದ ಕಂದು ಹುಡಿ... ಅದು ಅವನ ಜಾಗಿಂಗ್ ಷೂನಿಂದ ಜಾರಿ ಬಿದ್ದಿದ್ದು. ಅದು ಆತ ಜಾಗಿಂಗ್ ಮಾಡ್ತಾ ಇದ್ದ ಜಾಗದ ಮಣ್ಣಿಗೆ ತಾಳೆಯಾಗುತ್ತೆ. ಕುಟ್ಟಯ್ಯನ ರೂಮಿನಲ್ಲಿ ಅಂತಹ ಷೂಗಳನ್ನು ಕಂಡೆ. ಅವನ ಮುರಿದ ಕನ್ನಡಕ ಕಸದಬುಟ್ಟಿಯಲ್ಲಿತ್ತು! ನಿನ್ನೆ ಹಿಂದಿರುಗುವ ಮುನ್ನ ನಾನು ಬಚ್ಚಲುಮನೆಯ ಬಾಗಿಲು ರಂಧ್ರದಲ್ಲಿ ಇಣುಕಿ ನೋಡಲು ಸಾಧ್ಯವಿದೆಯೆನ್ನುವುದನ್ನು ಖಚಿತಪಡಿಸಿಕೊಂಡೆ. ಕನ್ನಡಕದ ಚೂರುಗಳು ಬಚ್ಚಲುಮನೆಯ ಬಾಗಿಲ ಪಕ್ಕವೇ ಇವೆ. ಕದಿಯುತ್ತಿರುವಾಗ ಯಾರಾದರೂ ಬಂದಲ್ಲಿ ಥಕ್ಕನೆ ಅಡಗಿಕೊಳ್ಳಲು ಅತೀ ಸನಿಹದ ಜಾಗ ಆರಿಸಿಕೊಳ್ಳುವುದು ಸಹಜ. ಆದ್ದರಿಂದ ಅವನು ಲಾಕರಿನ ಪಕ್ಕದಲ್ಲಿದ್ದ ಉಗ್ರಾಣಕ್ಕೇ ಹೋಗಬೇಕಿತ್ತು. ಬಚ್ಚಲುಮನೆಯ ಸನಿಹದಲ್ಲಿದ್ದ ಕೋಣೆಗೆ ಯಾಕೆ ಹೋದ? ಹಾಗಾಗಿ ಆತ ಬಚ್ಚಲುಮನೆಯ ಸಮೀಪವೇ ಇದ್ದಿರಬೇಕೆಂದು ತರ್ಕಿಸಿದೆ. ಆದ್ದರಿಂದ ಆತ ಹಣ ಕದಿಯಲಿಲ್ಲ ಎಂದು ನಿರ್ಧಾರಕ್ಕೆ ಬಂದೆ.’

‘ಮತ್ತೆ ಹಣ ಕದ್ದಿದ್ದು ಯಾರು?’

‘ಕುಟ್ಟಯ್ಯ ಕಿಟಕಿಯ ಪರದೆಯಡಿಯಲ್ಲಿ ಅಡಗಿದ್ದನ್ನು ಒಬ್ಬಾತ ಕಂಡಿದ್ದಾನೆ. ಅವನಿಗೆ ಈತನ ಮೇಲೆ ದ್ವೇಷವಿತ್ತು. ಈ ಅವಕಾಶ ಉಪಯೋಗಿಸಿಕೊಂಡ ಆತ ಲಾಕರಿನಿಂದ ಹತ್ತು ರೂಪಾಯಿ ನೋಟಿನ ಕಟ್ಟು ತೆಗೆದ. ಕುಟ್ಟಯ್ಯನಿಗೆ ಕ್ಲೆಪ್ಟೋಮೇನಿಯಾ ಇರುವುದು ಆತನಿಗೆ ತಿಳಿದಿತ್ತು. ಕುಟ್ಟಯ್ಯ ಚಮಚಗಳನ್ನು ಕದ್ದಿದ್ದನ್ನು ಆತ ಕಂಡಿದ್ದ. ಆ ವ್ಯಕ್ತಿ ಒಂದು ತಪ್ಪು ಗ್ರಹಿಕೆ ಮಾಡಿದ್ದ. ಸಿ.ಸಿ. ಟೀವಿಯಲ್ಲಿ ಕುಟ್ಟಯ್ಯ ಬಂದಿದ್ದು ರೆಕಾರ್ಡ್ ಆಗುತ್ತದೆಂದು ಆತ ಭಾವಿಸಿದ್ದ. ಸಿ.ಸಿ. ಟೀವಿ ಕೆಟ್ಟಿರೋದು ಆತನಿಗೆ ಗೊತ್ತಿರಲಿಲ್ಲ, ಅಲ್ವೇ ಚರ್ಮಣ್ಣ?’

ಚರ್ಮಣ್ಣನ ಮೊಗ ಬಿಳಿಚಿತು.

‘ಕಳವಿನ ನಾಟಕವಾಡಿದ ಚರ್ಮಣ್ಣನಿಗೆ ನಾವು ಬಂದಾಗ ಅಚ್ಚರಿಯಾಯಿತು. ಅದನ್ನು ನಾನು ಗಮನಿಸಿದೆ. ನಾವು ಮಾತನಾಡುವಾಗ ಸಿ.ಸಿ. ಟೀವಿ ಕೆಟ್ಟಿರೋದು ಆತನಿಗೆ ಗೊತ್ತಾಯಿತು. ಸಿ.ಸಿ. ಟೀವಿ ಸರಿಯಿದ್ದಲ್ಲಿ ಕುಟ್ಟಯ್ಯ ಆರೋಪಿಯಾಗ್ತಿದ್ದ. ಆಗ ಯಾರೂ ನೋಟಿನ ಕಟ್ಟಿನ ಬಗ್ಗೆ ತಲೆಕೆಡಿಸಿಕೊಳ್ತಿರಲಿಲ್ಲ. ಆದ್ದರಿಂದ ಕುಟ್ಟಯ್ಯನ ಕೋಣೆಯೊಳಗೆ ಆ ನೋಟಿನ ಕಟ್ಟು ಇಟ್ಟೇ ಇಡ್ತಾನೆ ಅಂತಂದುಕೊಂಡೆ. ಇಡದೇ ಇದ್ರೂ, ಇವತ್ತು ಬೆಳಿಗ್ಗೆ ಅವನ ರೂಮಲ್ಲಿ ಅದು ಪತ್ತೆಯಾಗುತ್ತಿತ್ತು, ಬಿಡಿ. ಅದನ್ನ ನಿನ್ನೆ ರಾತ್ರಿ ಇಲ್ಲಿರಿಸಿದ. ಕುಟ್ಟಯ್ಯನ ಕೋಣೆಯ ಹಿಂಭಾಗ ಕಿಟಕಿಯ ಸನಿಹ ಮುರುಟಿಹೋದ ಪಾದದ ಗುರುತು ಸ್ಪಷ್ಟವಾಗಿಯೇ ಇದೆ. ನಿನ್ನೆ ಸಂಜೆಯ ನಂತರ ಮಳೆ ಬಂದಿಲ್ಲ. ಆದ್ದರಿಂದ ಆ ಹೆಜ್ಜೆಗುರುತು ಆ ನಂತರವೇ ಮೂಡಿತೆಂದು ಖಚಿತವಾಗಿ ಹೇಳಬಹುದು.”

‘ನಿಮ್ಗೆ ಇದೆಲ್ಲಾ ಹೇಗೆ...?’

‘ನಿನ್ನೆ ಕುಟ್ಟಯ್ಯನಿಗೆ ಮೆಸೇಜ್ ಮಾಡಿದೆ. ‘ನೀನು ಬಚ್ಚಲುಮನೆಯಲ್ಲಿ ಇಣುಕಿದ್ದು ಗೊತ್ತಾಗಿದೆ, ಮಾತನಾಡಲು ಬಾ’ ಅಂತ. ಅವ್ನು ನಿನ್ನೆ ಸಂಜೆ ಸಿಕ್ಕಿದವನು ಚರ್ಮಣ್ಣನ ವಿಷ್ಯ ತಿಳಿಸಿದ. ಚರ್ಮಣ್ಣ ಕುಟ್ಟಯ್ಯನಿಂದ ಸಾಲ ತೆಗೆದುಕೊಂಡಿದ್ದನಂತೆ. ಕುಟ್ಟಯ್ಯ ಅದನ್ನೀಗ ವಾಪಾಸು ಕೇಳಲು ಶುರುಮಾಡಿದ್ದರಿಂದ, ಚರ್ಮಣ್ಣನಿಗೆ ಕೋಪವಿದೆಯಂತೆ. ಅದಕ್ಕೇ ಕುಟ್ಟಯ್ಯನನ್ನು ಇಲ್ಲಿಂದ ಓಡಿಸಲು ಚರ್ಮಣ್ಣ ಈ ಕಳ್ಳತನದ ಯೋಜನೆ ಹಾಕಿದ.’

ಅಲ್ಲಿಂದ ಹಿಂದಿರುವಾಗ ಪ್ರಶ್ನಿಸಿದೆ,

‘ಸಿಸಿಟೀವಿ ಇದ್ರೂ ಕುಟ್ಟಯ್ಯ ಮನೆಯೊಳಗೆ ಯಾಕ್ ಹೋದ?’

‘ಅವನು ಇಣುಕಿದ್ದು ಯಾರಿಗೂ ಗೊತ್ತೇ ಆಗದಿರುವಾಗ, ಸಿ.ಸಿ. ಟೀವಿಲಿ ಯಾಕೆ ಪರೀಕ್ಷೆ ಮಾಡ್ತಾರೆ?’

ಕರಮಚಂದನ ಮಾತಿಗೆ ನಾನು ತಲೆದೂಗಿದೆ.